# ಕರ್ನಾಟಕ ವಿಧಾನ ಸಭೆ

ಬುಧವಾರ, ದಿನಾಂಕ ೧೧ನೇ ಫೆಬ್ರವರಿ ೧೯೮೭

ಸದನವು ವಿಧಾನಸಭೆ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಘಂಟೆ
೩ ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠದಲ್ಲಿದ್ದರು

## ಪ್ರಶ್ನೋತ್ತರಗಳು

ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಇದಿನಬ್ಬ ಅವರ ಪ್ರಶ್ನೆ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಬೇಕಾಗಿದೆ, ಆದ್ದರಿಂದ ಅದನ್ನು ಮುಂದೆ ತೆಗೆದುಕೊಳ್ಳೋಣ.

### ಶಿಕಾರಿಪುರ ತಾಲ್ಲೂಕಿನಲ್ಲಿ ಕೊಳವೆ ನೀರು ಸರಬರಾಜು ಯೋಜನೆ

೧೫೯ (೨೦೮) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ೧೯೮೬-೮೭ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಪೈಪಡ್ ವಾಟರ್ ಸಪ್ಲೈ ಮುಂಜೂರಾತಿ ಆಗಿರುವ ಗ್ರಾಮಗಳ ಹೆಸರುಗಳೇನು ?

ಆ) ಈಗಾಗಲೇ ಕೆಲಸ ಪ್ರಾರಂಭಿಸಿರುವ ಗ್ರಾಮಗಳ ಹೆಸರುಗಳೇನು ? ಮತ್ತು ಉಳಿದ ಗ್ರಾಮಗಳಲ್ಲಿ ಕೆಲಸ ಪ್ರಾರಂಭಿಸದಿರಲು ಕಾರಣವೇನು ?

ಇ) ಚರ್ಚುಗುಂಡಿ ಗ್ರಾಮದಲ್ಲಿ ಸದರ ಯೋಜನೆಯು ಮುಂಜೂರಾಗಿ ತೊಟ್ಟಿ ಕಟ್ಟಡದ ಕೆಲಸ ನಿಂತು ಎಷ್ಟು ವರ್ಷವಾಯಿತು ಹಾಗೂ ಅದಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ೧೯೮೬-೮೭ನೇ ಸಾಲಿನಲ್ಲಿ ಮುಂಜೂರಾಗಿರುವುದಿಲ್ಲ.

ಆ) ೧) ಚರ್ಚುಗುಂಡಿ ; ರಾಷ್ಟ್ರೀಯ ಗ್ರಾಮೀಣ

೨) ಹಿರೇಜಂಜೂರು ; ನೀರು ಸರಬರಾಜು ಯೋಜನೆ.

೩) ಮರವಳ್ಳಿ ತ್ವರಿತ ಗ್ರಾಮೀಣ ನೀರು ಸರಬರಾಜು ಯೋಜನೆ ಈ ಗ್ರಾಮಗಳಲ್ಲಿ ಕೆಲಸ ಪ್ರಾರಂಭಿಸಲಾಗಿದೆ. ಉಳಿದ ಗ್ರಾಮಗಳಲ್ಲಿ ಅಂದರೆ ಬೇಗೂರು, ಮೂಲೂರು ಇನಾಂ ಅಗ್ರಹಾರ ಮಚಿಡಿ, ಮಲ್ಲೇನಹಳ್ಳಿ ಮತ್ತು ಕಟ್ಟಡಹಳ್ಳಿಗಳನ್ನು ಮುಂದಿನ ಆಯವ್ಯಯ ಅಂದಾಜಿನಲ್ಲಿ ಹಂತಹಂತವಾಗಿ ತೆಗೆದುಕೊಳ್ಳಲಾಗುವುದು.

ಇ) ೧-೬-೮೪ರಿಂದ ನಿಂತಿದೆ. ಕಾಂಕ್ರೀಟ್ ಗುಣಮಟ್ಟವು ಬಗ್ಗೆ ಗ್ರಾಮೀಣ ಜನರು ಸಂದೇಹ ವ್ಯಕ್ತಪಡಿಸಿದ್ದರಿಂದ ಈ ಬಗ್ಗೆ ಕೃಷ್ಣರಾಜ ಸಾಗರದಲ್ಲಿರುವ ಕರ್ನಾಟಕ ಇಂಜನಿಯರಿಂಗ್ ರಿಸರ್ಚ್ ಸ್ಟೇಷನ್ ಅಧಿಕಾರಿಗಳು ಸದರಿ ಕೆಲಸವನ್ನು ಪರೀಕ್ಷಿಸಿದ್ದಾರೆ. ಅವರಿಂದ ಫಲಿತಾಂಶ ಬಂದ ಕೂಡಲೇ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಈ ಪಾರ್ಟಿ ಒಳಗಾದರೂ ಪಾರವಳ್ಳಿ; ಹಿರೇಜಂಬೂರು ಕೆಲಸ ಪೂರ್ಣ ಮಾಡುತ್ತೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ. ಎರಡನೆಯದು, ಚರ್ಚುಗುಂಡಿಯಲ್ಲಿ ಟ್ಯಾಂಕ್ ಕಟ್ಟುತ್ತಿರುವುದು ಸರಿಯಲ್ಲ ಎಂದು ಆದು ಪ್ರಾರಂಭ ವಾದಾಗಲೇ ಆ ಊರಿನ ಜನರು ವಿರೋಧ ಮಾಡಿದರು. ನಾನೂ ದೂರು ಕೊಟ್ಟಿದ್ದೆ. ಸಂಬಂಧ ಪಟ್ಟ ಅಧಿಕಾರಿಗಳು ಸರಿಯಾಗಿ ಇದನ್ನು ಮಾಡುವ ಪ್ರಯತ್ನ ಮಾಡಿದ್ದಿದ್ದರೆ ೧೯೮೪ರಿಂದ ಕೆಲಸ ನಿಂತು ಈ ಸ್ಥಿತಿಗೆ ಬರಬೇಕಾಗಿತ್ತೇ ? ಕೃಷ್ಣರಾಜಸಾಗರಕ್ಕೆ ಪರೀಕ್ಷೆ ಮಾಡಲು ಕಾಂಕ್ರೀಟನ್ನು ಯಾವ ತಾರೀಖಿನಂದು ಕಳುಹಿಸಿಕೊಟ್ಟಿದ್ದೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕ ಹಳ್ಳಿ ಯವರ ಮತ್ತು ಶಾಸಕರ ಕ್ಷಮೆಯನ್ನು ನಾನು ಮೊದಲು ಕೇಳುತ್ತೇನೆ. ೧೯೮೪ರಲ್ಲಿ ಈ ಕೆಲಸ ನಿಂತಿದೆ. ೧೯೮೬ರಲ್ಲಿ ಕೆ.ಆರ್.ಎಸ್.ಗೆ ಪರೀಕ್ಷೆ ಮಾಡುವುದಕ್ಕೆ ಕಾಂಕ್ರೀಟನ್ನು ಕಳುಹಿಸಿದ್ದೇವೆ. ಅಲ್ಲಿಂದ ಪರದಿ ಬಂದನಂತರ ಮುಂದಿನ ಕ್ರಮಕೈಗೊಳ್ಳುತ್ತೇವೆ, ನಿಧಾನವಾಗಿರುವುದಕ್ಕಾಗಿ ಆ ಗ್ರಾಮದ ಜನರ, ಶಾಸಕರ ಕ್ಷಮೆ ಕೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮೊದಲನೆ ಎರಡು ಕೆಲಸಗಳನ್ನು ಪಾರ್ಟಿಯೊಳಗಾದರೂ ಮುಗಿಸಿಕೊಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಆಯವ್ಯಯದಲ್ಲಿ ಎಷ್ಟು ಹಣ ಇದೆಯೋ ಗೊತ್ತಿಲ್ಲ. ಪೂರ್ತಿ ಹಣ ಇದ್ದರೆ ಮುಗಿಸಿಕೊಡುತ್ತೇನೆ. ಕಡಿಮೆ ಇದ್ದರೆ ಏಪ್ರಿಲ್ ಮೇ ನಲ್ಲಿ ಈ ಕೆಲಸ ಚಾಲು ಮಾಡುವ ಹಾಗೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ತಪ್ಪನ್ನು ಕೇಳುವುದು ವಿಶೇಷವಾಗಿ ಚರ್ಚುಗುಂಡಿ ಗ್ರಾಮದ ಬಗ್ಗೆ. ನಮ್ಮ ರಾಜ್ಯದಲ್ಲಿ ಅನೇಕ ಕಡೆ ಪೈಪ್ ವಾಟರ್‌ಸಪ್ಲೈ ಟ್ಯಾಂಕುಗಳನ್ನು ಏನು ಕಟ್ಟುತ್ತಿದ್ದಾರೆ ಅಲ್ಲೆಲ್ಲಾ ಸರಿಯಾಗಿ ಕೆಲಸ ಮಾಡದೆ ಟ್ಯಾಂಕುಗಳು ನೋಡುತ್ತಿವೆ ಎಂದು ದೂರುಗಳು ಬರುತ್ತಿವೆ. ನಾನು ನಿರ್ದಿಷ್ಟವಾದ ಉದಾಹರಣೆ ಕೊಟ್ಟಿರುವುದರಿಂದ ಸರಿಯಾಗಿ ಸಿಮೆಂಟ್ ಉಪಯೋಗಿಸದೆ ಅಸಮರ್ಪಕ ಕೆಲಸವಾಗಿರುವುದರಿಂದ ಒಳ್ಳೆಯ ರೀತಿ ಟ್ಯಾಂಕ್ ಕಟ್ಟುವಂತೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ನನ್ನ ಗಮನಕ್ಕೆ ಬಂದಿದೆ. ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

## ಸವದತ್ತಿ ತಾಲ್ಲೂಕಿನಲ್ಲಿ ಕೊರೆಯಲಾದ ಕೊಳವೆ ಬಾವಿಗಳು

೧೬೦ (೨೯೫) ಚಂದ್ರಶೇಖರ ಮಾಮನಿ (ಸವದತ್ತಿ).—ಮಾನ್ಯ ಗ್ರಾಮಾಭಿವೃದ್ಧಿ ಮಂತ್ರಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಕೊರೆದ ಬಾವಿಗಳನ್ನು ಹಾಕಲಾಗಿದೆ ?

ಆ) ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಎಷ್ಟು ಕೊರೆದ ಬಾವಿಗಳನ್ನು ಹಾಕಲಾಗಿದೆ ?

ಇ) ಇದೇ ಪ್ರಕಾರ ಸವದತ್ತಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಯು ಯಾವ ಹಂತದಲ್ಲಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ, ಪಂಚಾಯತ್ ಮತ್ತು ಪಕ್ಷ ಮಂತ್ರಿಗಳು).—

ಅ) ನವೆಂಬರ್ ೧೯೮೬ ಕೊನೆಯವರೆಗೆ ಒಟ್ಟು ೧, ೧೭, ೨೦೪ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ರಾಜ್ಯದಲ್ಲಿ ಹಾಕಲಾಗಿದೆ.

ಆ) ೫೦೭ (ನವೆಂಬರ್ ೮೬ರ ಕೊನೆಯವರೆಗೆ)

ಇ) ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನಲ್ಲಿ ಇದುವರೆಗೂ ೩೭ ಗ್ರಾಮಾಂತರ ನಳದ ನೀರು ಸರಬರಾಜು ಯೋಜನೆಗಳು ಸರ್ಕಾರದ ಅನುಮೋದನೆ ಪಡೆದಿವೆ. ಅವುಗಳ ಪೈಕಿ ೩೨